# ನಿಮ್ಗೆ ಅಫೇರ್ ಇದೆಯೇನ್ರೀ..?

ವಿವಾಹೇತರ ಸಂಬಂಧಗಳ ನೈತಿಕತೆ ಬಗ್ಗೆ ಇರುವ ದೃಷ್ಟಿಕೋನಗಳು ವೈಯಕ್ತಿಕ ಸಂಗತಿಗಳಾದರೂ, ಇವು ಕುಟುಂಬ ಜೀವನಕ್ಕೆ ಕೊಡಲಿ ಪೆಟ್ಟು ನೀಡುತ್ತದೆ ಎಂಬುದಂತೂ ಸತ್ಯ.

■ **ಡಾ.ಬ್ರಹ್ಮಾನಂದ ನಾಯಕ**

ಮದುವೆ ಆದ ಮೇಲೂ ಪ್ರೇಮ ಸಂಬಂಧಗಳನ್ನು ಬೆಳೆಸಿ ಕ್ಲೇಶ ಹುಟ್ಟು ಹಾಕಿಕೊಂಡು ಮದುವೆಯನ್ನು ಮುರಿದುಕೊಂಡ ಉದಾಹರಣೆ ಎಲ್ಲ ಕಾಲದಲ್ಲೂ ಸಿಗುತ್ತದೆ. ವಿವಾಹೇತರ ಸಂಬಂಧಗಳು ಮಾನಸಿಕವಾಗಿ ತೀವ್ರ ಒತ್ತಡ ಸೃಷ್ಟಿಸಿ ಕುಟುಂಬ ಜೀವನಕ್ಕೆ ಎರವಾದರೂ ಇದರತ್ತ ಆಕರ್ಷಿತರಾಗುವವರ ಸಂಖ್ಯೆ ಕಡಿಮೆಯೇನಿಲ್ಲ. ಇಷ್ಟೆಲ್ಲ ಅನಾಹುತ ಸೃಷ್ಟಿಸುವ ವಿವಾಹಬಾಹಿರ ಸಂಬಂಧಗಳ ಅವಶ್ಯಕತೆ ಇದೆಯೇ? ಕೆಲವರಿಗೆ ಇದರತ್ತ ಏಕಿಷ್ಟು ಆಕರ್ಷಣೆ ಎಂಬುದು ಅರ್ಥವಾಗದ ವಿಷಯ.

ವಿವಾಹೇತರ ಸಂಬಂಧಗಳು ಈಚಿನ ದಿನಗಳಲ್ಲಿ ಕೇವಲ ಪುರುಷರಿಗೆ ಮಾತ್ರ ಸೀಮಿತವಾಗಿಲ್ಲ. ಪುರುಷ ಪ್ರಧಾನ ಸಮಾಜ ಪುರುಷರಿಗೆ ಇಂಥ ವಿವಾಹೇತರ ಸಂಬಂಧಗಳಿಗೆ ಅನುವು ಮಾಡಿಕೊಟ್ಟರೂ, ಈಚಿನ ದಿನಗಳಲ್ಲಿ ವಿವಾಹಿತ ಸ್ತ್ರೀಯರೂ ಇಂಥ ಸಂಬಂಧಗಳನ್ನು ಇಟ್ಟುಕೊಳ್ಳುತ್ತಿದ್ದಾರೆ. ಇಂಥ ಸಂಬಂಧಗಳನ್ನು ಯಾರು ಪ್ರಾರಂಭಿಸುತ್ತಾರೆ ಎಂಬುದು ಮುಖ್ಯವಾಗದಿದ್ದರೂ, ಇಬ್ಬರು ಪ್ರೌಢ ಸ್ತ್ರೀ ಪುರುಷರು ಬೆಳೆಸುವ ಇಂಥ ಸಂಬಂಧದಿಂದ ಮಾನಸಿಕ ಒತ್ತಡ, ನೋವು ದುಃಖ ಉಂಟಾಗುತ್ತದೆ.

ವಿವಾಹೇತರ ಸಂಬಂಧಗಳ ನೈತಿಕತೆ ಬಗ್ಗೆ ಇರುವ ದೃಷ್ಟಿಕೋನಗಳು ವೈಯಕ್ತಿಕ ಸಂಗತಿಗಳಾದರೂ, ಇವು ಕುಟುಂಬ ಜೀವನಕ್ಕೆ ಕೊಡಲಿ ಪೆಟ್ಟು ನೀಡುತ್ತದೆ ಎಂಬುದಂತೂ ಸತ್ಯ. ಅಫೇರ್‌ಗಳು ನಿಂತ ನೀರಲ್ಲ, ಇದನ್ನು ಪೋಷಿಸಲು ಪ್ರೇಮ, ಸಮಯ, ಶಕ್ತಿ ಎಲ್ಲವೂ ಬೇಕಾಗುತ್ತದೆ. ಕಡೆಗೆ ವಿವಾಹ ಅಥವಾ ಪ್ರೇಮ ಸಂಬಂಧ ಎರಡರಲ್ಲೊಂದನ್ನು ಆಯ್ಕೆ ಮಾಡಿಕೊಳ್ಳಲೇ ಬೇಕಾದ ಅನಿವಾರ್ಯತೆ ಉಂಟಾಗುತ್ತದೆ.

ಅಫೇರ್‌ಗಳನ್ನು ದೂಷಿಸುವ ಮೊದಲು ಕೆಲವು ಸತ್ಯಗಳನ್ನು ಇಂದಿನ ಆಧುನಿಕ ಜಗತ್ತಿನಲ್ಲಿ ಎಲ್ಲರೂ ಅರ್ಥ ಮಾಡಿಕೊಳ್ಳಲೇ ಬೇಕಾಗುತ್ತದೆ. ಇಂದಿನ ಜಗತ್ತಿನಲ್ಲಿ ಆಕರ್ಷಣೆ ಎಂಬುದು ಇದ್ದೇ ಇದೆ. ಕಚೇರಿಗಳಲ್ಲಿ ಸಹೋದ್ಯೋಗಿಗಳತ್ತ ಆಕರ್ಷಣೆ ಉಂಟಾಗುವುದು ಸಾಮಾನ್ಯವಾಗುತ್ತಿದೆ. ಮನೆಯಲ್ಲಿ ಮನೆಯವಳ ಜತೆಗಿಂತ ಹೆಚ್ಚು ಹೊತ್ತು ಕಚೇರಿಯಲ್ಲಿ ಕಳೆಯುವುದೂ ಇದಕ್ಕೊಂದು ಕಾರಣವಾಗಿರುತ್ತದೆ. ಅಪರಿಚಿತ ವ್ಯಕ್ತಿಯತ್ತ ಆಕರ್ಷಿತಗೊಳ್ಳುವುದು, ಆತ/ಆಕೆ ಕುರಿತು ಕನಸು ಕಾಣುವುದೂ ಅತ್ಯಂತ ಸ್ವಾಭಾವಿಕವೇ ಆಗಿದೆ. ಆದರೆ ಇಂಥ ಆಕರ್ಷಣೆಗಳಿಗೆ ನೀವು ಹೇಗೆ ಪ್ರತಿಕ್ರಿಯಿಸುತ್ತೀರಿ ಎಂಬುದರ ಮೇಲೆ ನಿಮ್ಮ ವಿವಾಹದ ಭವಿಷ್ಯ ಅಡಗಿರುತ್ತದೆ.

ನಿಮಗೆ ನಿಮ್ಮ ಕಾಮನೆಗಳನ್ನು ತಣ್ಣೀರಿನ ಸ್ನಾನ ಮಾಡಿ ಹತ್ತಿಕ್ಕಲು ಸಾಧ್ಯವಾದರೆ ಯಾವುದೇ ತೊಂದರೆ ಇಲ್ಲ. ಆದರೆ ಕಾಮನೆ ಬಂದೊಡನೆ ತೀರಿಸಿಕೊಂಡರೆ ನಿಮ್ಮ ವಿವಾಹಕ್ಕೆ ಮತ್ತೊಂದು ಪೆಟ್ಟು ಬಿದ್ದಂತೆ. ಯಾವುದೇ ಸ್ಥಿತಿಯಲ್ಲೂ ವಿವಾಹೇತರ ಸಂಬಂಧಗಳನ್ನು ತಡೆಗಟ್ಟುವುದೇ ಒಳ್ಳೆಯದು.



### ಅಫೇರ್‌ಗೆ ಕಾರಣಗಳು

★ **ಲೈಂಗಿಕ ಕಾರಣಗಳು:** ಬಹುತೇಕ ಅಫೇರ್‌ಗಳಿಗೆ ಲೈಂಗಿಕ ಕಾಮನೆಗಳನ್ನು ತೀರಿಸಿಕೊಳ್ಳುವುದೇ ಕಾರಣವಾಗಿರುತ್ತದೆ. ವಿವಾಹದಲ್ಲಿನ ಲೈಂಗಿಕ ಅತೃಪ್ತಿ ಇಂಥ ಅಫೇರ್‌ಗಳನ್ನು ಹುಟ್ಟುಹಾಕುತ್ತದೆ. ಆದರೆ ಲೈಂಗಿಕ ತಜ್ಞರ ಜತೆ ಸಮಾಲೋಚಿಸಿ ವಿವಾಹದಲ್ಲಿನ ಲೈಂಗಿಕ ಅತೃಪ್ತಿ ನಿವಾರಿಸಿಕೊಳ್ಳುವುದು ಅಫೇರ್ ಮಾಡಿಕೊಳ್ಳುವುದಕ್ಕಿಂತ ಉತ್ತಮ ಉಪಾಯವಾಗಿದೆ.

★ **ಸಂತೃಪ್ತಿಯ ಹುಡುಕಾಟ:** ಕೆಲವು ಸಲ ದಾಂಪತ್ಯದಲ್ಲಿನ ಅಸಂತೃಪ್ತ ಭಾವನೆ ಅಫೇರ್‌ಗೆ ಕಾರಣವಾಗುತ್ತದೆ. ದಂಪತಿಯಲ್ಲಿ ಒಬ್ಬರಿಗೆ ಸಂತೃಪ್ತ ಭಾವ ಬರದಿದ್ದಾಗ ಅವರು ವಿವಾಹೇತರ ಸಂಬಂಧಗಳನ್ನು ತಮ್ಮ ಸಂತೃಪ್ತಿಗಾಗಿ ಹುಡುಕುತ್ತಾರೆ. ಇಂಥ ಸಂದರ್ಭಗಳಲ್ಲಿ ದಂಪತಿ ಥೆರಪಿಸ್ಟ್ ಭೇಟಿಯಾಗಿ ಸಲಹೆ ಪಡೆದರೆ ವಿವಾಹೇತರ ಸಂಬಂಧಗಳತ್ತ ಮುಖ ಮಾಡುವ ಪ್ರಮೇಯ ಬರುವುದಿಲ್ಲ.

★ **ನಿಯಂತ್ರಣಕ್ಕೆ ಪ್ರತಿಭಟನೆ:** ಪತಿ ಅಥವ ಪತ್ನಿ ತಮ್ಮ ಸಂಗಾತಿಯನ್ನು ತನ್ನ ಅಂಕೆಯಲ್ಲಿಟ್ಟುಕೊಳ್ಳುವ